# ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/92/2015-16 ದಿನಾಂಕ:03.05.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| ಕೆ.ಹನುಮಂತರಾವ್ ತಂದೆ ವೆಂಕೋಬರಾವ್<br>ಗ್ರಾಮ:ಮಾಲವಿ ತಾ:ಹೆಚ್.ಬಿ.ಹಳ್ಳಿ | 1.ಕಂದಾಯ ನೀರೀಕ್ಷಕರು, ಕೋಗಳಿ<br>2.ಹೆಚ್.ಕೃಷ್ಣಭಟ್ಟ ತಂದೆ ದಿ:ಗಣೇಶ ಭಟ್ಟ<br>ಗ್ರಾಮ:-ಕುಕನೂರು ತಾ:-ಯಲಬುರ್ಗಾ |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ಮಾಲವಿ | 170ಎ | 0-48 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಮಾಲವಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಮಾಲವಿ ಗ್ರಾಮದ ನಿವಾಸಿಯಾದ ಕೆ.ಹನುಮಂತರಾವ್ ತಂದೆ ವೆಂಕೋಬರಾವ್ ಇವರು ನೋಂದಾಯಿತವಲ್ಲದ ವಿಲ್ ದಸ್ತಾವೇಜು ಪ್ರಕಾರ ಹಕ್ಕುಬದಲಾವಣೆ ಮಾಡಲು ಅರ್ಜಿಯನ್ನು ದಿನಾಂಕ:02.11.2015 ರಂದು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21ರ ನೋಟೀಸನ್ನು ದಿನಾಂಕ:20.11.2015 ರಂದು ಪ್ರಚುರ/ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲ. ಮೂಲ ಪಟ್ಟಾದಾರರ ವಂಶಸ್ಥರು ಸಹಿಮಾಡಿರುವುದಿಲ್ಲದ ಕಾರಣ, ಎಂ.ಆರ್.ನಂ.18/15-16 ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಅರ್ಜಿದಾರರಿಗೆ ದಿ:04.03.2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:04.03.2016 ರಿಂದ 03.05.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಅರ್ಜಿದಾರರು ಹೇಳುವಂತೆ; ನೋಂದಾಯಿತವಲ್ಲದ ವಿಲ್ ದಸ್ತಾವೇಜು ಮೇರೆಗೆ ಅರ್ಜಿಯನ್ನು ಸಲ್ಲಿಸಿದ್ದು, ವಿಲ್ ಪ್ರಕಾರ ನನ್ನ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡುರುತ್ತಾರೆ.

ಮುಂದುವರೆದು, ಅರ್ಜಿದಾರರು ಮತ್ತು ಪಟ್ಟಾದಾರರ ಮಕ್ಕಳಾದ ಗೀತಾ.ವಿ ಕುಲಕರ್ಣಿ ಮತ್ತು ನಾರಾಯಣ ಭಟ್ಟ ಇವರು ಹಾಜರಾಗಿ ಹೇಳುವಂತೆ; ಸದರಿ ಜಮೀನು ನಮ್ಮ ತಾಯಿಯವರದಾಗಿದ್ದು, ನಮ್ಮ ತಾಯಿಯ ತಮ್ಮ ಅಂದರೆ ಅರ್ಜಿದಾರರ ಹೆಸರಿಗೆ ನೋಂದಾಯಿತವಲ್ಲದ ವಿಲ್ ಮಾಡಿದ್ದು ಸರಿ ಇರುತ್ತದೆ ಅವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ನಮ್ಮಗಳ ಯಾವುದೇ ತಂಟೆ, ತಕರಾರು ಇರುವುದಿಲ್ಲ ಎಂದು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಮುಂದುವರೆದು, ದಿನಾಂಕ:13.04.2016 ರಂದು ಹೆಚ್.ಕೃಷ್ಣಭಟ್ಟ ತಂದೆ ದಿ:ಗಣೇಶ ಭಟ್ಟ ಇವರು ಲಿಖಿತವಾಗಿ ತಮ್ಮ ತಕರಾರು ಅರ್ಜಿಯನ್ನು ಈ ಕಛೇರಿಯಲ್ಲಿ ಸಲ್ಲಿಸಿರುತ್ತಾರೆ.

ದಿನಾಂಕ:03.05.2016 ರಂದು ಪ್ರಕರಣ ಕರೆಯಲಾಗಿ, ಅರ್ಜಿದಾರರು ಮತ್ತು ತಕರಾರುದಾರರಾದ ಹೆಚ್.ಕೃಷ್ಣಭಟ್ಟ ತಂದೆ ದಿ:ಗಣೇಶ ಭಟ್ಟ ಇವರು ಹಾಜರಾಗಿರುತ್ತಾರೆ.

-ತಕರಾರುದಾರರು ಹೇಳುವಂತೆ; ಸದರಿ ಜಮೀನು ನಮ್ಮ ತಾಯಿಯ ಹೆಸರಿಗೆ ಪಟ್ಟಾ ಇದ್ದು, ನೋಂದಾಯಿತವಲ್ಲದ ವಿಲ್ ದಸ್ತಾವೇಜಿಗೆ ನನ್ನ ತಕರಾರು ಇರುತ್ತದೆ. ಎಂದು ಹೇಳಿಕೆ ನೀಡಿರುತ್ತಾರೆ.

ಸದರಿ ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆಮಾಡಲಾಗಿ, ವಾರಸುದಾರರಿಂದ ಆಕ್ಷೇಪಣೆ ಬಂದಿರುತ್ತದೆ. ನೋಂದಾಯಿತವಲ್ಲದ ವಿಲ್ ದಸ್ತಾವೇಜಿಗೆ ಉದ್ಭವಿಸಿದ ಪ್ರಶ್ನೆಯಾಗಿರುವುದರಿಂದ ಉಭಯ ಪಕ್ಷಕಾರರು ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಳ್ಳಲು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಈ ಕೆಳಕಂಡಂತೆ ಆದೇಶ;

<u>-:ಆದೇಶ:-</u>

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129 ರನ್ವಯ ಮತ್ತು ಎಂ.ಆರ್.ನಂ.18/2015-16 ರ ಪ್ರಕಾರ, ನೋಂದಾಯಿತವಲ್ಲದ ವಿಲ್ ದಸ್ತಾವೇಜಿಗೆ ಉದ್ಭವಿಸಿದ ಪ್ರಶ್ನೆಯಾಗಿರುವುದರಿಂದ ಉಭಯ ಪಕ್ಷಕಾರರು ತಮ್ಮ ಹಕ್ಕನ್ನು ಸಾಭೀತುಪಡಿಸಿಕೊಳ್ಳಲು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:03.05.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

3/5/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು
ನಾಡ ಕಾರ್ಯಾಲಯ, ಕೋಗಳಿ

ಉಪ ತಹಶೀಲ್ದಾರ್,
ನಾಡ ಕಾರ್ಯಾಲಯ,
ಕೋಗಳಿ.

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಶುದ್ಧಪ್ರತಿ ಕಡತಕ್ಕೆ.

20/5/16